**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-477/2023 **PW**-1

**ದಿಃ 07.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4 ರವರ ಪರ ಶ್ರೀ ಜೆಡ್ ಕೆ ಟಿ ಪರ ವಕೀಲರಿಂದಃ**

**1.** ನಿಪಿ 1 ರಿಂದ 10 ದಾಖಲೆಗಳನ್ನು ಬಿಟ್ಟು ನನ್ನ ಶಾಲಾ ಶೈಕ್ಷಣಿಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರ ಸರಿ. ನಿಪಿ 5 ರಲ್ಲಿ ತೋರಿಸಿರುವ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿ ಶಿವುಬಾಯಿ ರವರ ಹೆಸರಿನಲ್ಲಿ ಮಾಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸಿಟಿಸರ್ವೆ ನಂಃ925 ನನ್ನ ತಂದೆ ತಮ್ಮ ಹೆಸರಿನಲ್ಲಿ ಖರೀದಿ ಮಾಡಿ ನಂತರ ತಾಯಿ ಹೆಸರಿಗೇ ಮಾಡಿರುತ್ತಾರೆಂದು ತೋರಿಸಲು ಯಾವದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 6 ರಲ್ಲಿರುವ ಸಿಟಿಸರ್ವೆ ನಂಃ926/ಎ ಈ ಆಸ್ತಿಯು ನನ್ನ ತಾಯಿ ಹೆಸರಿನಲ್ಲಿದ್ದು ಆ ನಂತರ ಆ ಆಸ್ತಿಯನ್ನು ನನ್ನ ಅಣ್ಣನ ಹೆಸರಿಗೆ ಮಾಡಿದ್ದಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಿಟಿಸರ್ವೆ ನಂಃ926/ಎ ಆಸ್ತಿ ಕೂಡಾ ನನ್ನ ತಾಯಿಯ ಸ್ವಸಂಪಾದಿತ ಆಸ್ತಿ ಎಂದರೆ ಸಾಕ್ಷಿ ನನ್ನ ತಂದೆ ಖರೀದಿ ಹಿಡಿದು ಅವರ ಹೆಸರಿನಲ್ಲಿ ಮಾಡಿರುತ್ತಾರೆ ಎನ್ನುತ್ತಾರೆ. ನಿಮ್ಮತಂದೆ ತಮ್ಮ ಪರಿಶ್ರಮದ ಹಣ ಹಾಕಿ ಸದರಿ ಸಿಟಿಸರ್ವೆ ನಂಃ926/ಎ ಆಸ್ತಿ ಖರೀದಿ ಮಾಡಲು ಖರೀದಿ ಪತ್ರ ಮಾಡಿಕೊಂಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಕೇಸನ 2 ನೇ ಪ್ರತಿವಾದಿ ದಾರವಾಡ ಜಿಲ್ಲೆಯ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. 2 ನೇ ಪ್ರತಿವಾದಿ ಸದರಿ ಸಿಟಿಸರ್ವೆ ನಂಃ926/ಎ 77 ಲಕ್ಷ ಸಾಲ ಪಡೆದು ಮನೆ ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅವರ ಹೆಸರಿನಲ್ಲಿ ಅವರು ಆಸ್ತಿ ಮಾಡಿಸಿಕೊಂಡ ನಂತರ ಮನೆ ಕಟ್ಟಿಸಿಕೊಂಡಿರುತ್ತಾರೇಂದು ನುಡಿಯುತ್ತಾರೆ. ಇವತ್ತಿನವರೆಗೂ 2 ನೇ ಪ್ರತಿವಾದಿ ಸದರಿ ಸಾಲಕ್ಕೆ ಕಂತು ಹಾಗೂ ಬಡ್ಡಿ ತುಂಬುತ್ತಾ ಬರುತ್ತಿದ್ದಾರೆಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ತಂದೆ ಕೂಡಾ ಕೃಷಿ ಇಲಾಖೆಯಲ್ಲಿ ಅದಿಕಾರಿಯಾಗಿದ್ದರು ಎಂದರೆ ಸರಿ.

2. ಕುಂದಗೋಳ ತಾಲೂಕ ಯರೇಬೂದಿಹಾಳ ಗ್ರಾಮದಲ್ಲಿ ಶೆಡ್ಯೂಲ ಎ ಆಸ್ತಿಯನ್ನು ನನ್ನ ಹೆಸರಿನಲ್ಲಿ, ನನ್ನ ತಾಯಿ ಹೆಸರಿನಲ್ಲಿ, 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಖರೀದಿಯಾಗಿದೆ ಎಂದರೆ ಸಾಕ್ಷಿ ಮೊದಲು ನನ್ನ ತಂದೆ ಹೆಸರಿನಲ್ಲಿ ಆ ಆಸ್ತಿ ಖರೀದಿಯಾಗಿತ್ತು ನಂತರ ಇವರು ಅವುಗಳೆಲ್ಲವನ್ನು ಡಿವೈಡ ಮಾಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆಂದು ಹೇಳಿದ್ದು ಈ ದಾಖಲೆಯನ್ನು ನ್ಯಾಯಾಲಯದ ಮುಂದೆ ತರಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇಲ್ಲ ಎನ್ನುತ್ತಾರೆ. ನನ್ನ ತಂದೆಯ ಸರ್ವಿಸ ರೆಕಾರ್ಡ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇಲ್ಲ ಎನ್ನುತ್ತಾರೆ. ನನ್ನ ತಂದೆ ಹೆಸರು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ನಿವೃತ್ತಿಯಾಗುವವರೆಗೂ ವೀರಭದ್ರಪ್ಪ ಕುರಗುಂದ ಎಂಬುದಾಗಿ ಇದೆಯೇ ಹೊರತು ಯಾನೆತೋಟಗಾರ ಎಂಬುದಾಗಿ ಎಲ್ಲಿಯೂ ಇಲ್ಲ ಹಾಗೂ ಯೂವ ದಾಖಲೆ ಇಲ್ಲ ಎಂದರೆ ಸಾಕ್ಷಿ ಅವರು ಅದನ್ನು ಬದಲಾವಣೆ ಮಾಡಿಕೊಂಡಿರುವದಿಲ್ಲ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಈ ದಾಖಲೆಗಳನ್ನು ಬಿಟ್ಟು ಹಾಗೂ ಆ ಆಸ್ತಿಗಳನ್ನು ಬಿಟ್ಟು ನನ್ನ ತಂದೆಯ ತಂದೆ, ಅವರ ತಂದೆ ಗಳಿಸಿರುವಂತಹ ಯಾವದೇ ಆಸ್ತಿಗಳು ನನ್ನ ತಂದೆಗೆ ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಿಪಿ 1 ರಿಂದ 10 ನ್ನು ಬಿಟ್ಟು ನಾಲ್ಕು ತಲೆಮಾರುಗಳ ಆಸ್ತಿಯ ಯಾವದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕುರಗುಂದ ಎನ್ನುವವರ ಆಸ್ತಿ ಯಾವದರೂ ಇಲ್ಲ ಎನ್ನುತ್ತಾರೆ. ನಿಂಗಪ್ಪ ತೋಟಗೇರ ಎನ್ನುವವರು ನನ್ನ ತಂದೆಗಾಗಲಿ, ನನಗಾಗಲಿ ಹಾಗೂ 2 ರಿಂದ 4 ನೇ ಪ್ರತಿವಾದಿಗಳಿಗಾಗಲಿ ಯಾವದೇ ರೀತಿಯಿಂದಲೂ ಸಂಬಂದ ಇಲ್ಲ ಎಂದರೆ ಸಾಕ್ಷಿ ಅವರು ನನ್ನ ಅಜ್ಜನವರು ಅಂದರೆ ನನ್ನ ತಂದೆ ದತ್ತಕ ಹೋಗಿದ್ದು ಎನ್ನುತ್ತಾರೆ.

**(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.